ರವರಿಗೆ
ಪ್ರಾಂಶುಪಾಲರು
ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು,
ತುಮಕೂರು.

ಇಂದ
ಎಂ.ಸಿ.ಸುಧಾಕರ
ಮುಖ್ಯಸ್ಥರು ಇತಿಹಾಸ ವಿಭಾಗ
ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು,
ತುಮಕೂರು.

ಮಾನ್ಯರೆ.

ವಿಷಯ: ಇತಿಹಾಸ ವಿಭಾಗದಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜನೆ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ.05-12-2022ರಂದು ನಮ್ಮ ಕಾಲೇಜಿನ ಇತಿಹಾಸ ವಿಭಾಗದಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಹರಿಪ್ರಸಾದ್ ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ ತುಮಕೂರು ವಿಶ್ವವಿದ್ಯಾನಿಲಯದ ಕಲಾ ಕಾಲೇಜು ರವರನ್ನು ಅಹ್ವಾನಿಸಲಾಗುವುದು. ಮತ್ತು ವೈಜ್ಞಾನಿಕ ಶಕ್ತಿಯಾಗಿ ಭಾರತ ಎಂಬ ವಿಷಯವನ್ನು ಪ್ರಸ್ತುತ ಪಡಿಸಲು ಉದ್ದೇಶಿಸಲಾಗಿದೆ. ಹಾಗೂ ತಾವು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಬೇಕೆಂದು ಕೇಳಿಕೊಳ್ಳುತ್ತ ಈ ಕಾರ್ಯಕ್ರಮಕ್ಕೆ ಅನುಮತಿ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಇಂತಿ ತಮ್ಮ ವಿಧೇಯ
M.C. Sudhakara
30/11/2022.

PRINCIPAL
Sree Siddaganga College of Arts,
Science and Commerce for Women
B.H Road, TUMKUR.
30/11/22

Scanned with CamScanner

# ವಿಶೇಷ ಉಪನ್ಯಾಸ ಕಾರ್ಯಕ್ರಮ ಇತಿಹಾಸ ವಿಭಾಗದಿಂದ

## ವಿಷಯ: ವೈಜ್ಞಾನಿಕ ಶಕ್ತಿಯಾಗಿ ಭಾರತ

ಈ ಕಾರ್ಯಕ್ರಮವನ್ನು ದಿನಾಂಕ.05-12-2022ರಂದು ಸಮಯ 10-30ರಿಂದ 12-10ರವರೆಗೆ ನಡೆಸಲಾಯಿತು. ಕುಮಾರಿ ಹರಿಣಿಯವರಿಂದ ಪ್ರಾರ್ಥನೆ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದ ವಿಶೇಷ ಉಪನ್ಯಾಸಕರಾಗಿ ಪ್ರೊ.ಹರಿಪ್ರಸಾದ್ ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ ತುಮಕೂರು ವಿಶ್ವವಿದ್ಯಾನಿಲಯ ಕಲಾ ಕಾಲೇಜು ತುಮಕೂರು ಇವರನ್ನು ಆಹ್ವಾನಿಸಲಾಗಿತ್ತು. ಈ ಉಪನ್ಯಾಸದಲ್ಲಿ ಸ್ವತಂತ್ರ ನಂತರದ ಭಾರತದ ಪ್ರಥಮ ಪ್ರಧಾನಿಗಳಾದ ನೆಹರುರವರ ದೂರದೃಷ್ಟಿತನದಿಂದ ಭಾರತದ ವಿದೇಶಾಂಗ ನೀತಿಯನ್ನು ರೂಪಿಸಿ ಎಲ್ಲಾ ರಂಗಗಳಲ್ಲಿ ಭಾರತವನ್ನು ಅಭಿವೃಧಿ ಪಥಕ್ಕೆ ತರಲು ಶ್ರಮಿಸಿರುತ್ತಾರೆ. ಗೌತಮ ಬುದ್ದರಿಂದ ಮಹಾತ್ಮಗಾಂಧಿಯಜಿವರಗೆ ಭಾರತ ಆಹಿಂಸೆ ಮತ್ತು ಶಾಂತಿಯನ್ನು ಬಯಸಿರುವ ನಾಡು, ಗಾಂಧೀಜಿಯವರು ದಕ್ಷಿಣಾ ಆಫ್ರಿಕಾದಲ್ಲಿ ಸಾಮಾನ್ಯ ಮಾನವನಾಗಿ ಹೋಗಿ ಹೊಳೆಯುವ ವಜ್ರದಂತೆ ಪರಿವರ್ತನೆಯಾಗಿ ಬಂದರು ಅಂದರೆ ವಿಶ್ವಕ್ಕೆ ಸತ್ಯಾಗ್ರಾಹವನ್ನು ಪರಿಚಯಿಸಿದರು. ಭಾರತ ಆಭಿವೃದ್ದಿಗೆ ISRO,TATA , ಸಂಸ್ಥೆಗಳ ಕೊಡುಗೆಯನ್ನು ಅಬ್ದುಲ್‌ಕಲಾಂರವರ ಶ್ರಮವನ್ನು ಹೋಮಿಯ ಜಹಂಗೀರ್ ಬಾಬಾರವರನ್ನು, ಇಂದಿನ ಸಾಫ್ಟವೇರ್ ತಂತ್ರಜ್ಞಾನಕ್ಕೆ ರಾಜೀವಗಾಂಧಿಯವರ ಕೊಡುಗೆ ಮನಮೋಹನ ಸಿಂಗ್ , ಚಿದಂಬರಂ , ರವರ ಕೊಡುಗೆ ಸಹಕಾರದಿಂದ ಇಂದು ಭಾರತ ಅದ್ಭುತಶಕ್ತಿಯಾಗಿ ಬೆಳೆಯುತ್ತಿದೆ. ಭಾರತ ಪ್ರಪಂಚದ ಆರ್ಥಿಕ ಶಕ್ತಿಯಲ್ಲಿ ಐದನೇ ಸ್ಥಾನವನ್ನು ಪಡೆದಿದೆ. ಮುಂದೆ ಜನಸಂಖ್ಯೆಯಲ್ಲಿ ಪ್ರಥಮ ಸ್ಥಾನವನ್ನು ಪಡೆಯಲಿದೆ. ಎನ್ನುತ್ತ ಇಂದಿನ ವಿದ್ಯಾವಂತರಾದ ನೀವು ನಿಮ್ಮ ಕರ್ತವ್ಯವನ್ನು ಅರಿತುಕೊಳ್ಳಬೇಕಾಗಿದೆ. ಈ ರೀತಿ ಆನೇಕ ಅಂಶಗಳನ್ನು ವಿದ್ಯಾರ್ಥಿಗಳಿಗೆ ಉಪದೇಶಿಸಿರುತ್ತಾರೆ.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡ ಪ್ರಾಂಶುಪಾಲರಾದ ಡಾ.ಕೆ.ಸಿ.ಜಯಸ್ವಾಮಿಯವರು ತಮ್ಮ ಅಧ್ಯಕ್ಷಿಯ ನುಡಿಗಳಲ್ಲಿ ಭಾರತ ವಿವಿಧ ರಂಗಗಳಲ್ಲಿ ಮುಂಚೂಣಿಯಲ್ಲಿ ಬೆಳೆಯುತ್ತಿದೆ. ಭಾರತೀಯರೆಲ್ಲರ ಸಹಕಾರವಿದ್ದಲ್ಲಿ ಪ್ರಪಂಚದಲ್ಲಿ ಎಲ್ಲಾ ರಂಗಗಳಲ್ಲಿ ಮೊದಲ ಸ್ಥಾನ ಪಡೆಯಬಹುದು.

ಭಾರತ ದೇಶ ಯಾವದೇಶದ ಮೇಲೂ ಯುದ್ದವನ್ನು ಸಾರಿ ಲೂಟಿ ಮಾಡಿಲ್ಲ. ಭಾರತ ಶಾಂತಿಪ್ರಿಯ ರಾಷ್ಟ್ರ ಹಾಗೂ ಎಲ್ಲಿ ಶಾಂತಿ ನೆಲಸಿರುತ್ತದೆಯೋ ಅಲ್ಲಿ ಅಭಿವೃದ್ದಿ ಕಾಣುತ್ತದೆ. ಎಂಬ ಹಿತನುಡಿಗಳಾ ನಾಡಿದರು.

ಈ ಕಾರ್ಯಕ್ರಮದ ಸಂಯೋಜಕರಾದ ಹಾಗೂ , ಇತಿಹಾಸ ವಿಭಾಗದ ಮುಖ್ಯಸ್ಥರಾದ ಎಂ.ಸಿ. ಸುಧಾಕರ ರವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಪ್ರಥಮ ದ್ವಿತೀಯ ತೃತೀಯ ಬಿ.ಎ ಎಲ್ಲಾ ವಿದ್ಯಾರ್ಥಿಗಳು ಹಾಜರಿದ್ದರು.

ಇತಿಹಾಸ ವಿಭಾಗದ ಮುಖ್ಯಸ್ಥರು

ಪ್ರಾಂಶುಪಾಲರು

**PRINCIPAL**
Sree Siddaganga College of Arts
Science and Commerce for Women
B H Road TUMKUR

Scanned with CamScanner




PRINCIPAL
Sree Siddaganga College of Arts,
Science and Commerce for Women
B.H Road, TUMKUR

Scanned with CamScanner




PRINCIPAL
Sree Siddaganga College of Arts.
Science and Commerce for Women
B.H Road. TUMKUR.

Scanned with CamScanner